3. **ವಿಷಯ:** ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಮುಜರಾಯಿ ಇಲಾಖೆಗೆ ಸೇರಿದ ಹಣವನ್ನು ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ಇಡಲು ಅವಕಾಶ ಇಲ್ಲದಂತೆ ಜಾರಿಯಲ್ಲಿರುವ ಸರ್ಕಾರಿ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):– ಮನ್ಯ ಅಧ್ಯಕ್ಷರೆ, ವಿಷಯ: ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಮುಜರಾಯಿ ಇಲಾಖೆಗೆ ಸೇರಿದ ಹಣವನ್ನು ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ಇಡಲು ಅವಕಾಶ ಇಲ್ಲದಂತೆ ಜಾರಿಯಲ್ಲಿರುವ ಸರ್ಕಾರಿ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ. ಮಾನ್ಯ ಸಹಕಾರ ಮತ್ತು ಸಕ್ಕರೆ ಇಲಾಖೆ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 58 ರನ್ವಯ ಯಾವುದೇ ಒಂದು ಸಹಕಾರ ಸಂಘವು ತನ್ನ ನಿಧಿಗಳನ್ನು ಹೂಡಿಕೆ ಮಾಡುವ ಬಗ್ಗೆ ಈ ಕೆಳಕಂಡಂತೆ ಅವಕಾಶ ಇರುತ್ತದೆ.

ಸರ್ಕಾರದ ಉಳಿತಾಯ ಖಾತೆ, ಇಂಡಿಯನ್ ಟ್ರಸ್ಟ್ ಆ್ಯಕ್ಟ, 1882 ರ 20 ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತೆಗಳಲ್ಲಿ, ಇತರ ಸಹಕಾರ ಸಂಘದ ಷೇರು ಅಥವಾ ಭದ್ರತಾ ಪತ್ರಗಳಲ್ಲಿ, ಯಾವುದೇ ಸಹಕಾರ ಬ್ಯಾಂಕಿನಲ್ಲಿ, ರಿಸರ್ವ ಬ್ಯಾಂಕಿನ ನಿಯಂತ್ರಣದಲ್ಲಿರುವ ಷೆಡ್ಯೂಲ್ ಬ್ಯಾಂಕಿನಲ್ಲಿ ಹಾಗೂ ರಿಸರ್ವ ಬ್ಯಾಂಕು ಕಾಲಕಾಲಕ್ಕೆ ಹೊರಡಿಸಿದ ಸೂಚನೆಗಳಿಗೆ ಮತ್ತು ನಿರ್ದೇಶನಗಳಿಗೆ ಅನುಸಾರವಾಗಿ ಸಹಕಾರ ಬ್ಯಾಂಕುಗಳಲ್ಲಿ ನಿಧಿಗಳನ್ನು ತೊಡಗಿಸಲು ಅವಕಾಶವಿರುತ್ತದೆ.

II. ರಾಜ್ಯದಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸೇರಿದಂತೆ, ಯಾವುದೇ ಸಹಕಾರ ಸಂಘವು ಡಿಸಿಸಿ ಬ್ಯಾಂಕ್ ಒಳಗೊಂಡಂತೆ, ಯಾವುದೇ ಸಹಕಾರ ಬ್ಯಾಂಕಿನಲ್ಲಿ ತನ್ನ ನಿಧಿಗಳನ್ನು

ತೊಡಗಿಸಲು ಯಾವುದೇ ನಿರ್ಭಂಧ ಇರುವುದಿಲ್ಲ. ಮತ್ತು ನಿರ್ಬಧಿಸಿ ಸರ್ಕಾರ ಯಾವುದೇ ಸುತ್ತೋಲೆಯನ್ನು ನೀಡಿರುವುದಿಲ್ಲ.

III. ಕೃಷಿ ಮಾರುಕಟ್ಟೆ ಸಮಿತಿಗಳು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ 1966 ಕಲಂ 90 (3) ರನ್ವಯ ತನ್ನ ನಿಧಿಗಳನ್ನು ನಿಬಂಧಕರು ಅನುಮೋದಿಸಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ, ಸರ್ಕಾರಿ ಉಳಿತಾಯ ಖಾತೆಗಳಲ್ಲಿ, ಕೃಷಿ ಮಾರುಕಟ್ಟೆ ನಿರ್ದೇಶಕರು ಅನುಮೋದಿಸಿ ಅನುಸೂಚಿತ ಬ್ಯಾಂಕಿನಲ್ಲಿ, ಯಾವುದೇ ಕೇಂದ್ರ ರಾಜ್ಯ ಸರ್ಕಾರದ ಭದ್ರತೆಗಳಲ್ಲಿ ತೊಡಗಿಸಲು ಅವಕಾಶವಿರುತ್ತದೆ.

ದಿನಾಂಕ: 05–01–2008 ರಲ್ಲಿನ ಕೃಷಿ ಮಾರುಕಟ್ಟೆ ಇಲಾಖೆಯ ಸುತ್ತೋಲೆಯಂತೆ ನಿಧಿಗಳನ್ನು ಕ್ರಮವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಶೇ.60, ರಿಜಿಸ್ಟ್ರಾರ್ ಅನುಮೋದಿಸಿದ ಸಹಕಾರ ಬ್ಯಾಂಕುಗಳಲ್ಲಿ ಶೇ.20, ಮತ್ತು ಕೃಷಿ ಮಾರಾಟ ನಿರ್ದೇಶಕರ ಅನುಮತಿಯೊಂದಿಗೆ ಕೇಂದ್ರ/ರಾಜ್ಯ ಸರ್ಕಾರದ ಸೆಕ್ಯೂರಿಟಿಗಳಲ್ಲಿ ಶೇ.20 ರಂತೆ ತೊಡಗಿಸಲು ಅವಕಾಶವಿರುತ್ತದೆ.

IV. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 61 ರಲ್ಲಿ ನಿಧಿಗಳ ಅನುಸೂಚಿತ ಸಂಸ್ಥೆಗಳಲ್ಲಿ ಲಭ್ಯವಿರುವ ಹಣವನ್ನು ಹೂಡಿಕೆ ಮಾಡುವ ಬಗ್ಗೆ ಕೆಳಗಿನಂತೆ ವಿವರಿಸಿರುತ್ತದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1977 ರ ವಿಧಿ 61 ಮತ್ತು ನಿಯಮಗಳು 2002 ರ ನಿಯಮ 40(1) ರ ಪ್ರಕಾರ ಹಾಗೂ ಮುಜರಾಯಿ ಇಲಾಖೆಯ ದಿ:29–09–1975 ರ ರೀತ್ಯಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೇ ಠೇವಣಿ ಇಡಬೇಕೆಂದು ನಿರ್ದೇಶನ ನೀಡಿರುತ್ತದೆ. ಆದರೆ ಮುಜರಾಯಿ ಇಲಾಖೆ ಅಧೀನದಲ್ಲಿ ಬರುವ ದೇವಸ್ಥಾನಗಳ ಹೆಚ್ಚುವರಿ ಹಣವನ್ನು ದಿ:18–01–2002 ರ ಸುತ್ತೋಲೆಯಂತೆ ಹೆಚ್ಚುವರಿ ಹಣದಲ್ಲಿ ಶೇ.50 ರಷ್ಟು ಹಣವನ್ನು

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮತ್ತು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಠೇವಣಿ ಇಡುವಂತೆ ನಿರ್ದೇಶನ ನೀಡಿರುತ್ತದೆ.

ಮುಂದುವರೆದಂತೆ, ಆಯುಕ್ತರು, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ, ದಿ: 11–10–2012 ರನ್ವಯ, ನಿಯಮ 40(1) ರನ್ವಯ ಅನುಸೂಚಿತ ಸಂಸ್ಥೆ/ಘೋಷಿತ ಸಂಸ್ಥೆಗಳಿಗೆ ಸೇರಿದ ಹೆಚ್ಚುವರಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾತ್ರ ಠೇವಣಿಯಲ್ಲಿ ತೊಡಗಿಸತಕ್ಕದ್ದು ಎಂದು ಸೂಚಿಸಲಾಗಿರುತ್ತದೆ.

ಕೃಷಿ ಮಾರುಕಟ್ಟೆ ಮತ್ತು ಮುಜರಾಯಿ ಇಲಾಖೆಗಳೊಂದಿಗೆ ಸಮಾಲೋಚನೆ ಮಾಡಿ, ಈ ಎರಡು ಇಲಾಖೆಗಳಲ್ಲಿ ಲಭ್ಯವಾಗುವ ನಿಧಿಗಳನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ತೊಡಗಿಸುವ ಕುರಿತು ಸೂಕ್ತ ನಿರ್ದೇಶನ ನೀಡುವ ಸಂಬಂಧ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ರೀತಿಯಲ್ಲಿ ಮುಜರಾಯಿ ಮತ್ತು ಎಪಿಎಂಸಿ ಗಳಲ್ಲಿ ಏನು ಹಣ ಇದೆ, ಅದಕ್ಕೆ ಸಂಬಂಧಪಟ್ಟಂತೆ ಮುಜರಾಯಿ ಸಚಿವರ ಸುತ್ತೋಲೆಯನ್ನು ಹೊರಡಿಸಿ ಅವರ ಇಲಾಖೆಯಲ್ಲಿರುವ ಹಣದಲ್ಲಿ 50 ಭಾಗ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮತ್ತು ಉಳಿದ 50 ಭಾಗವನ್ನು ಅದರ ವ್ಯಾಪ್ತಿಯಲ್ಲಿ ಬರತಕ್ಕಂಥ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳಲ್ಲಿ ಇಡುವುದಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದೇ ರೀತಿಯಾಗಿ ಮಾರುಕಟ್ಟೆ ಇಲಾಖೆಯಲ್ಲಿ ಕೂಡ ಇವತ್ತು ಅಂದರೆ, ಇದಕ್ಕೆ ಉತ್ತರ ಕೊಡುವುದಕ್ಕೆ ಮುಂಚೆ ಶೇಕಡ 50ರಷ್ಟು ಹಣವನ್ನು ಜಿಲ್ಲಾ ಕೇಂದ್ರ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವಂತೆ ಈ ಬಗ್ಗೆ ಒಂದು ಸುತ್ತೋಲೆಯನ್ನು ಈಗಾಗಲೇ ಹೊರಡಿಸಲಾಗಿದೆ.

ಅಧ್ಯಕ್ಷರು:– ok.